**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ**359/2020**

ಸಿ.ಡಬ್ಲ್ಯೂ –12 ಪಿ.ಡಬ್ಲ್ಯೂ -8

| | | |
|---|---|---|
| ಹೆಸರು | ಃ | ಖುಬಾ |
| ತಂದೆಃಗಂಡ | ಃ | ಧೊಗಲು |
| ವಯಸ್ಸು | ಃ | 50 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಅಂಬಲಗಾ |

ದಿನಾಂಕಃ11.07.2023

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿತರ ಪರಿಚಯ ಇರುವುದಿಲ್ಲ. ಚಾಸಾ-6 ರವರ ಪರಿಚಯ ಇರುತ್ತದೆ ಉಳಿದವರ ಪರಿಚಯ ಇರುವುದಿಲ್ಲ. ಮೃತ ರತ್ನಾಬಾಯಿ ದಾಮು ಹಾಗೂ ಆದಿತ್ಯರವರ ಪರಿಚಯ ಇರುವುದಿಲ್ಲ. ಮೂರು ವರ್ಷದ ಹಿಂದೆ ಅಪಘಾತವಾಗಿತ್ತು. ಗಾಡಿ ಪಲ್ಟಿಯಾಗಿ ನಾನು ಬಿದ್ದಿದ್ದೆ. ಮತ್ತೇನಾಯಿತು ನನಗೆ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.10.02.2020 ರಂದು ಮದ್ಯಾಹ್ನ 3.45 ಗಂಟೆಗೆ ಅಂಬಲಗಾ ಕ್ರಾಸ ಕಮಾನಿನಿಂದ ಅಂಬಲಗಾ ಗ್ರಾಮಕ್ಕೆ ಹೋಗುವಾಗ ಘಟನೆ ಆಯಿತು ಎಂದರೆ ಸರಿ.ಆರೋಪಿ ಟಂಟಂ ವಾಹನ ಸಂಖ್ಯೆ ಕೆಎ-32/ವಿ-1889 ಚಲಾಯಿಸುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಗೂ ಮತ್ತಿತರರು ಆರೋಪಿಯ ವಾಹನದಲ್ಲಿ ಕುಳಿತು ಹೋಗುತ್ತಿದ್ದೇವು ಎಂದರೆ ನನಗೆ ಗೊತ್ತಿಲ್ಲ. ನಾನು ಚಾಸಾ-8 ರಿಂದ 15, ರತ್ನಾಬಾಯಿ, ದಾಮು ಹಾಗೂ ಆದಿತ್ಯರವರು ಆರೋಪಿಯ ವಾಹನದಲ್ಲಿ ಹೋಗುತ್ತಿದ್ದೇವು ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ನಿಧಾನವಾಗಿ ವಾಹನ ಚಲಾಯಿಸು ಎಂದರೂ ಆರೋಪಿ ಅತಿ ವೇಗವಾಗಿ ನಿಷ್ಕಾಳಜಿತನದಿಂದ ವಾಹನ ಚಲಾಯಿಸಿ ವಾಹನ ಪಲ್ಟಿಯಾಯಿತು ಎಂದರೆ ನನಗೆ ಗೊತ್ತಿಲ್ಲ. ನನಗೂ ಸಣ್ಣ ಪುಟ್ಟ ಗಾಯಗಳು ಆಗಿರುತ್ತವೆ ಎಂದರೆ ಸರಿ. ಈ ಅಪಘಾತದಲ್ಲಿ ರತ್ನಾಬಾಯಿ ಬಾಯಿ, ದಾಮು ಹಾಗೂ ಆದಿತ್ಯ ಮೃತ ಹೊಂದಿರುತ್ತಾರೆ ಎಂದರೆ ಸರಿ. ಚಾಸಾ-18 ರವರು ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೊಗಿರುತ್ತಾರೆ ಎಂದರೆ ಸರಿ. ಚಾಸಾ-8 ರಿಂದ 15 ರವರಿಗೆ ಘಟನೆಯಲ್ಲಿ ಗಾಯಗಳು ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಅಪಘಾತಪಡಿಸಿದವನ ಹೆಸರು ಮಂಜುನಾಥ ಎಂದರೆ ಸರಿ. ಆರೋಪಿ ಅತಿ ವೇಗವಾಗಿ ನಿಷ್ಕಾಳಜಿತನದಿಂದ ವಾಹನ ಚಲಾಯಿಸಿ ವಾಹನ ಪಲ್ಟಿಯಾಯಿತು ಎಂದು ನಾನು ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ. ಎ.ಸಿ.ಟಿ ವಕೀಲರಿಂದ</u>**

ಘಟನೆ ನಡೆದ ದಿನ ಟಂಟಂದಲ್ಲಿ 8 ಜನ ಇದ್ದೇವು. ಟಂಟಂದಲ್ಲಿ ಚಾಸಾ-13 ರವರು ಪರಿಚಯ ಇದ್ದರು. ಉಳಿದವರ ಪರಿಚಯ ಇರಲಿಲ್ಲ. ಅಂಬಲಗಾ ಹೋಗುವ ರಸ್ತೆಯಲ್ಲಿ ಒಂದು ದೊಡ್ಡ ಕಮಾನು ಇದೆ ಎಂದರೆ ಸರಿ. ಘಟನೆ ನಡೆದ ಸಮಯದಲ್ಲಿ ಕಮಾನದಿಂದ ಅಂಬಲಗಾ ಹೋಗುವ ರಸ್ತೆ ಸರಿ ಇರಲಿಲ್ಲ ಎಂದರೆ ಸರಿ. ಕಚ್ಚಾ ರಸ್ತೆ ಇದ್ದ ಕಾರಣ ವಾಹನ ವೇಗವಾಗಿ ಚಲಾಯಿಸಲು ಆಗುವುದಿಲ್ಲ ಎಂದರೆ ಸಾಕ್ಷಿ ಘಟನೆ ಆದಾಗ ವಾಹನ ವೇಗವಾಗಿತ್ತು ಎಂದು ಹೇಳುತ್ತಾರೆ. ಎಷ್ಟು ವೇಗವಾಗಿ ಚಲಾಯಿಸುತ್ತಿದ್ದರು ಎಂದು ಹೇಳಲು ಆಗುವುದಿಲ್ಲ. ಅಂಬಲಗಾ ಹೋಗುವ ರಸ್ತೆಯಲ್ಲಿ ತಿರುವು ಇದೆ ಎಂದರೆ ಸರಿ. ಈ ತಿರುವಿನಲ್ಲಿ ಗಾಡಿ ಪಲ್ಟಿಯಾಗಿದೆ ಎಂದರೆ ಸರಿ. ತಿರುವಿನಲ್ಲಿ ವಾಹನ ನಿಧಾನವಾಗಿ ಚಲಾಯಿಸುತ್ತಿದ್ದನು ರಸ್ತೆ ಸರಿ ಇಲ್ಲದ ಕಾರಣ ತಿರುವಿನಲ್ಲಿ ವಾಹನ ಪಲ್ಟಿಯಾಯಿತು ಎಂದರೆ ಸರಿ. ಆರೋಪಿಯ ಹೆಸರು ವಿಳಾಸ ನನಗೆ ಗೊತ್ತಿಲ್ಲ. ಆರೋಪಿಯನ್ನು ನಾನು ಇಂದೇ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ. ನಾನು ಪೋಲಿಸರ ಮುಂದೆ ಯಾವಾಗ ಹೇಳಿಕೆ ನೀಡಿದೆ ಎಂದು ನನಗೆ ನೆನಪಿಲ್ಲ. ಪರಿಹಾರ ಧನಕ್ಕಾಗಿ ನಾವು ಯಾವುದೇ ದಾವೆ ಸಲಿಲಸಿರುವುದಿಲ್ಲ, ತೀರಿಕೊಂಡವರ ಕುಟುಂಬ ಪರಿಹಾರ ಧನಕ್ಕಾಗಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಇರಬಹುದು ಎಂದು ಹೇಳುತ್ತಾರೆ. ರಸ್ತೆ ಸರಿ ಇಲ್ಲದ ಕಾರಣ ಅಪಘಾತವಾಗಿರುತ್ತದೆ ಎಂದರೆ ಸಾಕ್ಷಿ ರಸ್ತೆ ಸರಿಯಾಗಿತ್ತು ಎಂದು ಹೇಳುತ್ತಾರೆ. ರಸ್ತೆ ಮುಂಚೆ ಸರಿ ಇಲ್ಲದ ಕಾರಣ ಅಪಘಾತ ಆಗುತ್ತಿದ್ದ ಕಾರಣ ರಸ್ತೆ ಸರಿ ಮಾಡಿರುತ್ತಾರೆ ಎಂದರೆ ಸರಿ. ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ಪರಿಹಾರ ಧನಕ್ಕಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇರುವುದಿಲ್ಲ.**

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ